# ವಿಜ್ಞಾನಿ ಆಗಬೇಕಿತ್ತು, ನಟಿಯಾದೆ

**ಶರ್ಮಿಷ್ಠ**
**ಉದಯದ ಯಾರಿವಳು ಯಾಮಿನಿ**



◆ **ನಿಮ್ಮ ಓದು ಮತ್ತು ವೃತ್ತಿಯ ವೈರುಧ್ಯದ ಬಗ್ಗೆ ಹೇಳಿ?**

ಬಯೋಕೆಮಿಷ್ಟ್ರಿ ಎಂಎಸ್ಸಿ ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದಿದ್ದೆ. ತುಂಬ ದಿನಗಳ ನಂತರ ನ್ಯೂಟ್ರಿಶಿಯನಿಸ್ಟ್ ಕೆಲಸ ಆರಂಭಿಸಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ನನ್ನ ಫೋಟೊ ನೋಡಿ ವಿನುಬಳಂಜ ಅವರ ತಂಡದಿಂದ 'ಜಾನಕಿರಾಮ್' ಆಡಿಷನ್‌ಗೆ ಫೋನ್ ಬಂತು. ಧಾರಾವಾಹಿ ನನಗೆ ಗೊತ್ತಿಲ್ಲ ಎಂದೆ. ಕಾರ್ಯಾಗಾರ ಇರುತ್ತದೆ. ನೀವು ಕಲಿತು ನಿಭಾಯಿಸಬಹುದು ಬನ್ನಿ ಎಂದರು. ಆಡಿಷನ್‌ನಲ್ಲಿ ನನ್ನ ಸ್ಮರಣಶಕ್ತಿಯಿಂದ ಹೇಗೋ ಮಾಡಿದೆ. ಯಾವ ಪಾತ್ರ ಎಂದು ಕೇಳಿದೆ ತಕ್ಷಣ ವಿಲನ್ ಎಂದರು. ಆ ತಕ್ಷಣ ನಾನು ಗಲಿಬಿಲಿಯಾದೆ. ನನ್ನ ಸ್ವಭಾವಕ್ಕೂ ಪಾತ್ರಕ್ಕೂ ತಾಳೆಯಾಗುವುದಿಲ್ಲ ಹೇಗೆ ಮಾಡಲು ಸಾಧ್ಯ ಎನ್ನುವುದು ನನ್ನ ಪ್ರಶ್ನೆಯಾಗಿತ್ತು.

ತಾಳ್ಮೆ, ಮೃದು ಸ್ವಭಾವದವಳು ನಾನು. ಎಲ್ಲರೂ ಮುದ್ದಾಗಿ ಇದ್ದೀಯಾ ಎನ್ನುತ್ತಾರೆ, ಆದರೆ ಖಳನಾಯಕಿ ಆಗಬೇಕು ಅಂತಾರಲ್ಲ ಎನ್ನುವ ತಕರಾರು ಆಗ ಕಾಡಿತ್ತು. ನಿಮ್ಮ ಕಣ್ಣುಗಳು ಅದ್ಭುತವಾಗಿವೆ. ಅದರಲ್ಲಿ ಆಟ ಆಡಿದರೆ, ಪಾತ್ರವನ್ನು ತುಂಬ ಚೆನ್ನಾಗಿ ಬೆಳೆಸಿಕೊಂಡು ಹೋಗಬಹುದು ಎಂದರು. ಅದಕ್ಕೂ ಸರಿ ಎಂದು ಒಪ್ಪಿಕೊಂಡೆ. ಒಂದೊಂದು ದಿನವೂ ನನಗೆ ಪಾಠವಾಗಿತ್ತು. ತಾಂತ್ರಿಕವಾಗಿಯೂ ಏನೂ ಗೊತ್ತಿರಲಿಲ್ಲ. ಎಲ್ಲವನ್ನೂ ಪರಿಶ್ರಮದ ಮೂಲಕವೇ ಕಲಿಯುತ್ತಾ ಬಂದಿದ್ದೇನೆ. ಹಿರಿಯ ಕಲಾವಿದರು ನನಗೆ ಸಹಾಯ ಮಾಡುತ್ತಿದ್ದರು.

◆ **ನಟಿಸಬಲ್ಲೆ ಎನ್ನುವ ವಿಶ್ವಾಸ ಮೂಡಿದ್ದು ಹೇಗೆ?**

ಮೊದಲ ಧಾರಾವಾಹಿಯಲ್ಲಿ ವೀಕ್ಷಕರಿಂದ ಹೊಸಬರು ಎನ್ನುವುದು ಗೊತ್ತಾಗುವುದೇ ಇಲ್ಲ ಎನ್ನುವ ಪ್ರತಿಕ್ರಿಯೆ ಬಂತು. ಅದು ನನಗೆ ಇನ್ನೂ ಭರವಸೆ ಮೂಡಿಸಿತು. ನಿಧಾನಕ್ಕೆ ನನ್ನನ್ನು ಗುರುತಿಸಲು ಆರಂಭಿಸಿದರು. ನನಗೊಂದು ವ್ಯಕ್ತಿತ್ವವೂ ನಿರ್ಮಾಣ ಆಯಿತು. ನಂತರ 'ಮನೆಯೇ ಮಂತ್ರಾಲಯ'ದಲ್ಲಿ ಅವಕಾಶ ಸಿಕ್ಕಿತು. ಬಾಲ್ಯದಿಂದಲೂ ಇಂಗ್ಲಿಷ್ ಸಿನಿಮಾಗಳನ್ನು ಹೆಚ್ಚು ನೋಡುತ್ತಾ ಬಂದಿದ್ದೇನೆ. ಅದರ ಶೈಲಿಯೇ ಭಿನ್ನ ಸ್ವತಃ ನಾನು ಯಾವತ್ತು ಪಾತ್ರವನ್ನು ಅನುಕಣೆ ಮಾಡಲು ಇಷ್ಟಪಡುವುದಿಲ್ಲ. ಸ್ವಂತಿಕೆ ಇಲ್ಲದಿದ್ದರೆ ಅದು ಅಭಿನಯ ಅಂತ ಅನ್ನಿಸುವುದಿಲ್ಲ. ಆದರೆ, ಒಂದು ಪಾತ್ರವನ್ನು ಹೇಗೆ ಆಡುತ್ತಾರೆ ಎನ್ನುವುದನ್ನು ನಾನು ಗಮನಿಸಿದ್ದೆ. ಆದೆಲ್ಲ ನನ್ನಲ್ಲಿ ಭರವಸೆಯನ್ನು ಹುಟ್ಟಿಸಿದ್ದರಿಂದ ಅಭಿನಯಿಸಬಲ್ಲೆ ಎನ್ನುವ ವಿಶ್ವಾಸ ಮೂಡಿತು. ತಮಿಳು ಟೀವಿಗೆ ಆಹ್ವಾನ ಬಂತು. ನನಗೆ ಭಾಷೆ ಗೊತ್ತಿಲ್ಲ. ಒಂದು ಡೈಲಾಗ್ ಕೊಟ್ಟರು. ಕಂಠಪಾಠ ಮಾಡಿ ಒಪ್ಪಿಸಿದೆ. ಆ ಪಾತ್ರ ತುಂಬ ಚೆನ್ನಾಗಿ ಸೆಟ್‌ಆಗಿತ್ತು. ಆ ಪಾತ್ರಕ್ಕೆ ಸನ್ ಕುಟುಂಬ ಅವಾರ್ಡ್ ಬಂತು. ಅಷ್ಟರಲ್ಲಿ ಲಾಕ್‌ಡೌನ್ ನಂತರ ಹೋಗಲು ನನಗೆ ಆಗಲಿಲ್ಲ. ರಿಪ್ಲೇಸ್ ಮಾಡಿ ಎಂದು ಹೇಳಿ ತುಂಬ ನೋವಿನಿಂದ ಆ ಪಾತ್ರವನ್ನು ಬಿಟ್ಟೆ. ಅಷ್ಟರಲ್ಲಿ ಕನ್ನಡದಲ್ಲಿ 'ಗೀತಾ' ಆರಂಭವಾಗಿತ್ತು. ಈಗ ಮತ್ತೆ ಆ ಪಾತ್ರ ನಾನೇ ಮಾಡಬೇಕು ಎಂದು ಕರೆಯುತ್ತಿದ್ದಾರೆ. ನಾನು ಜನವರಿಯಿಂದ ಹೋಗಲು ಸಮಯವನ್ನು ನಿಗದಿ ಮಾಡಿದ್ದೇನೆ. ಆದರೆ. ಕೊರೊನಾ ಎರಡನೇ ಅಲೆ ಎನ್ನುವುದು ಪುನಃ ಭೀತಿಯನ್ನು ಉಂಟುಮಾಡಿದೆ. ಮುಂದೆ ಏನಾಗುತ್ತೋ ಗೊತ್ತಿಲ್ಲ. ಯಾವುದೇ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತೇನೆ. ಗೊತ್ತಿಲ್ಲದಿದ್ದರೆ ಕಲಿತು ಮಾಡುತ್ತೇನೆ. ಆ ಶ್ರಮವೇ ನನ್ನನ್ನು ಬೆಳೆಸಿದೆ.

◆ **ಸಾಮಾಜಿಕ ಮಾಧ್ಯಮವನ್ನು ಈಗ ಹೇಗೆ ನಿರ್ವಹಿಸುತ್ತಿದ್ದೀರಿ?**

ಮೊದಲು ಸೀಮಿತ ಸ್ನೇಹವಲಯ ಇತ್ತು. ಫಾಲೋ ಮಾಡುವವರೂ ಕಡಿಮೆ ಇದ್ದರು. ನಿತ್ಯವೂ ಅದರ ಸಂಖ್ಯೆ ಏರುತ್ತಾ ಇದೆ. ಈಗ ನನ್ನ ಸಮಯವನ್ನು ಅದಕ್ಕೆ ಕೊಡಬೇಕಾಗುತ್ತದೆ. ನಮ್ಮ ಉಡುಗೆ ತೊಡುಗೆಯನ್ನು ಗಮನಿಸುವ ಅನುಸರಿಸುವ ದೊಡ್ಡ ವರ್ಗವೇ ಅಲ್ಲಿದೆ. ಫೋನಿನಲ್ಲಿ ಇರುವುದು ಕಿರಿಕಿರಿ ಅನಿಸಿದರೂ, ಸಾಮಾಜಿಕ ಮಾಧ್ಯಮಗಳ ಸ್ನೇಹಿತರ ನಿರೀಕ್ಷೆ ಮತ್ತು ಕುತೂಹಲಕ್ಕಾಗಿ ಸ್ವಲ್ಪ ಸಮಯವನ್ನು ಕೊಡುತ್ತೇನೆ. ಬ್ಲೌಸ್, ಸೀರೆಯನ್ನು ಜನ ನೋಡುತ್ತಾರೆ. ಅನೇಕರು ಪ್ರಶ್ನೆಗಳನ್ನು ಕೇಳುತ್ತಾರೆ. ಸಾಧ್ಯವಾದ ಮಟ್ಟಿಗೆ ಪ್ರತಿಕ್ರಿಯೆ ನೀಡುತ್ತೇನೆ. ಎಲ್ಲ ರೀತಿಯ ಪೋಸ್ಟ್‌ಹಾಕಲು ಪ್ರಯತ್ನ ಮಾಡುತ್ತೇನೆ. ಬ್ಲಾಗ್‌ಕೂಡ ಅಪ್‌ಡೇಟ್‌ಮಾಡುತ್ತಿರುತ್ತೇನೆ.

◆ **ವಿಜ್ಞಾನಿ ಆಗುವ ಅವಕಾಶ ತಪ್ಪಿಸಿಕೊಂಡೆ ಅಂತ ಅನ್ನಿಸಿದ್ದು ಇದೆಯಾ?**

ಖಂಡಿತ. ನಾನು ಶಾಲಾ ದಿನಗಳಲ್ಲೇ ಅಂತಹ ಕನಸು ಕಂಡವಳು. ಎಲ್ಲರಿಗೂ ಎಂಜಿನಿಯರ್ ಡಾಕ್ಟರ್ ಆಗುವ ಕನಸಿದ್ದರೆ ನನಗೆ ವಿಜ್ಞಾನಿ ಆಗುವ ಬಯಕೆ ಇತ್ತು. ಅದಕ್ಕೆ ಅವಕಾಶವೂ ಒದಗಿ ಬಂದಿತ್ತು. ಅಷ್ಟರಲ್ಲಿ ನನಗೆ ಮದುವೆ ಆಗಿದ್ದರಿಂದ ಗೃಹಿಣಿಯಾಗಿ ಕೂಡು ಕುಟುಂಬದ ಅಗತ್ಯಗಳನ್ನು ನಿರ್ವಹಿಸುವುದನ್ನು ಕಲಿಯಬೇಕಾಯಿತು. ಎಂಎಸ್ಸಿ ಮಾಡುವಾಗ ನನ್ನ ಪ್ರಾಜೆಕ್ಟ್ ಕೂಡ ಮುಂದಿನ ಸಂಶೋಧನೆಗೆ ಸಹಕಾರಿಯಾಗಿತ್ತು. ಫಸ್ಟ್‌ರ್‍ಯಾಂಕ್‌ಬರಲೂ ಅದು ಕಾರಣ ಆಯಿತು. ಆ ಬಗ್ಗೆ ಇನ್ನೂ ಅಧ್ಯಯನದ ಅಗತ್ಯ ಇತ್ತು. ನ್ಯಾನೋತಂತ್ರಜ್ಞಾನದಲ್ಲಿ ಪಿಎಚ್‌ಡಿ ಮಾಡುವ ಅವಕಾಶ ಬಿಡಬೇಕಾಯಿತು. ಗೃಹಿಣಿಯಾಗಿ ಅಚ್ಚುಕಟ್ಟಾಗಿ ಅಡುಗೆ ಮಾಡುವುದನ್ನು ಕಲಿತೆ ಅದೂ ನನಗೆ ಹೊಸತು. ಬಿಎಸ್ಸಿ– ಎಂಎಸ್ಸಿ ಎರಡರಲ್ಲೂ ರ್‍ಯಾಂಕ್‌ಪಡೆದಿದ್ದೆ. ಮನೆಯಲ್ಲಿ ಎಂಜಿನಿಯರಿಂಗ್ ಮಾಡುವ ಅಪೇಕ್ಷೆ ಇತ್ತು. ನನಗೆ ಬಿಎಸ್ಸಿ ಸೇರಬೇಕು ಎನ್ನುವ ಆಸೆ. ಸಾಧಿಸಬೇಕು ಎನ್ನುವ ಬಯಕೆ ಇದ್ದರೆ ಪರಿಶ್ರಮ ಮತ್ತು ಏಕಾಗ್ರತೆಯಿಂದ ಕೆಲಸ ಮಾಡಿದರೆ ಯಶಸ್ಸನ್ನು ಗಳಿಸಬಹುದು. ಯಾರೂ ಬೇಕಾದ್ದನ್ನೂ ಮಾಡಿ ತೋರಿಸಬಹುದು ನಾನು ಓದಿದ್ದಕ್ಕೂ ಮಾಡುತ್ತಿರುವ ಕೆಲಸಕ್ಕೂ ಯಾವ ಸಂಬಂಧವೂ ಇಲ್ಲ. ನಿತ್ಯ ಹೊಸತನ್ನು ಎದುರು ನೋಡುತ್ತಾ ಮಾಡುತ್ತಿರಬೇಕು ಎನ್ನುವ ಮನೋಭಾವ ನನ್ನದು. ವಿಜ್ಞಾನಿಯಾಗಿದ್ದರೆ ಸಮಾಜಕ್ಕೆ ಸಹಾಯ ಆಗುತ್ತಿತ್ತು. ಹಾಗೆಂದು ಸಮಾಜಮುಖಿಯಾಗಿ ಮಾಡುವ ಕೆಲಸ ನಿಲ್ಲಿಸಿಲ್ಲ. ಆರೋಗ್ಯ ಇಲ್ಲದಿದ್ದರೆ ಬೇರೆ ಇನ್ನೇನೂ ಇಲ್ಲ. ನಟಿಯಾಗಿದ್ದೂ ಆರೋಗ್ಯ ಪಾಲನೆ ಬಗ್ಗೆ ಮಾರ್ಗದರ್ಶನ ನೀಡುತ್ತೇನೆ. ನನಗೆ ಹತ್ತು ವರ್ಷದ ಮಗ ಇದ್ದಾನೆ. ನನ್ನನ್ನು ನೋಡಿದರೆ ಗೊತ್ತಾಗುವುದಿಲ್ಲ. ಏನು ತಿನ್ನಬೇಕು? ಎಷ್ಟು ತಿನ್ನಬೇಕು? ಹೇಗೆ ಅದನ್ನು ಜೀರ್ಣಿಸಬೇಕು ಎನ್ನುವ ಅರಿವು ಇದ್ದರೆ ನಮ್ಮ ಬಯಕೆಯ ರುಚಿಯನ್ನು ಸವಿಯಬಹುದು.

■ **ರಾಘವೇಂದ್ರ ಕೆ.**